

ಕೆನ್ನೆಗಳಿಗೆ ಕೂದಲುಗಳು ಅಂಟಿಕೊಂಡವು.

ಅವಳು ಮನೆಗೆ ಬಂದು ಬೆಲ್ ಮಾಡಿದಾಗ ಮೈ ಮನಸ್ಸು ದಣಿವಾಗಿತ್ತು. ಬಾಗಿಲು ತೆಗೆದ ಗಂಡನಿಗೆ 'ಹಾಯ್' ಎಂದವಳೇ ನೇರವಾಗಿ ಬೆಡ್ ರೂಮಿಗೆ ಹೋಗಿ ಅಲ್ಲಿ ಬ್ಯಾಗೆಸೆದು ಸ್ನಾನಕ್ಕೆ ಹೋದಳು. ಸ್ನಾನ ಮುಗಿಸಿ ತೆಳುನೀಲಿ ಕಾಟನ್ ಪೈಜಾಮಾ ಟೀಶರಟಿನಲ್ಲಿ ಘಮ್ಮೆನ್ನುತ್ತಾ ಹೊರಗೆ ಬಂದಳು. ಟೀವಿ ನೋಡುತ್ತಿದ್ದ ಗಂಡನ ಪಕ್ಕ ಅಂಟಿಕೊಂಡು ಕೂತು, ಅವನ ತೋಳು ಹಿಡಿದು ಭುಜದ ಮೇಲೆ ಕೆನ್ನೆ ಆನಿಸಿ ಕಾಲು ಚಾಚಿದಳು. ಅವನ ಬೆಚ್ಚಗಿನ ಸ್ಪರ್ಶ ನೆಮ್ಮದಿಯಿನ್ನಿಸಿತು. ಅವನು ಹಾಗೇ ಅವಳ ತೊಡೆಯ ಮೇಲೆ ಕೈಯ್ಯಿಟ್ಟು ಮೌನವಾಗಿದ್ದ. ಅವನ ನೋಟ ಅವಳ ಬೆಳ್ಳನೆಯ ನುಣುಪಾದ ಕಾಲುಗಳುದ್ದಕ್ಕೂ ಹರಿದಂತೆ 'ಅರೆ! ನಿನ್ನ ಕಾಲುಂಗುರ ಏನಾಯ್ತು?' ಎಂದ. ಅವಳು ಬೆಚ್ಚಿದಳು. ಥಟ್ಟನೆ ಎದ್ದು ಬಾತ್ರೂಮ್, ಬೆಡ್ ರೂಮ್, ಅಡಿಗೆಮನೆ ನಡುವೆ ಹುಡುಕುವಂತೆ ಓಡಾಡತೊಡಗಿದಳು. ಪರದಾಡುತ್ತಲೇ 'ಎಲ್ಲೋ ಇರಬೇಕು' ಎಂದು ಅವಳು ಗೊಣಗಿದಾಗ, ಅವನು ಕೂತಲ್ಲಿಂದಲೇ 'ಹೂಂ... ಹುಡುಕೋಕೆ ಏನಷ್ಟವಸರ... ರಿಲ್ಯಾಕ್ಸ್...' ಎಂದ. 'ತಗೊಂಡು 4–5 ತಿಂಗಳಾಗಿತ್ತಷ್ಟೆ...' ಎನ್ನುತ್ತಾ ಪೆಚ್ಚು ಮುಖ ಮಾಡಿಕೊಂಡು ಸೋಫಾದ ಮೇಲೆ ಅವನ ಪಕ್ಕ ಬಂದು ಕೂತಾಗ ಅವಳ ತಲೆ ಸವರಿ 'ಯಾಕೆ ಅಷ್ಟು ಬೇಜಾರು ಮಾಡ್ಕೋತಿ? ಎಲ್ಲಿ ಹೋಗುತ್ತೆ... ಸಿಗುತ್ತೆ' ಎಂದ. 'ಸಿಗದಿದ್ದರೆ, ಹೊಸದು ತಗೊಂಡ್ರಾಯ್ತು... ಬಾ... ಊಟ ಮಾಡೋಣ' ಎನ್ನುತ್ತಲೇ ಎದ್ದ.


## ಉಮಾ ರಾವ್

'ಬೆಳಕಿನ ಕೋಲು', ಅಗಸ್ತ್ಯ', 'ಸಿಲೋನ್ ಸುಶೀಲಾ ಹಾವಾಡಿಗ ಮೀಸೆ ಹೆಂಗಸರು ಮತ್ತು ಇತರರು', 'ಕಡಲಹಾದಿ', 'ನೂರುಸ್ವರ', 'ಅವಳ ಸೂರ್ಯ', 'ಮುಂಬೈ ಡೈರಿ' ಪುಸ್ತಕಗಳ ಲೇಖಕಿ. ಪ್ರಸ್ತುತ ಬೆಂಗಳೂರಿನಲ್ಲಿ ವಾಸ.